ತಪ್ಪೆಂದು ಭಾವಿಸಲಿಲ್ಲ. ಈ ಮುಕ್ತತೆ ಅವರ ದೊಡ್ಡ ಗುಣ. ವಿಮರ್ಶೆ ಒಮ್ಮೆ ಬರೆದುಬಿಡುವಂಥದ್ದಲ್ಲ, ಅದು ನಿರಂತರ ಬರೆಯುತ್ತಲೇ ಇರಬೇಕಾದದ್ದು ಅಂತ ನಂಬಿದ್ದರು. ಕೃತಿಯ ಆಳಕ್ಕಿಳಿದು ಅನುಭವಗಳನ್ನು ಶೋಧಿಸುತ್ತಿದ್ದರು. ಅವರು ಭಾಷಣ ಪ್ರಿಯರು. ಇದನ್ನು ತಪ್ಪೆಂದು ನಾನು ಹೇಳುತ್ತಿಲ್ಲ. ಅದರೆ ಇದರಿಂದ ಆಗಬಹುದಾದ ಕೆಲ ಅನನುಕೂಲತೆಗಳಿಂದ ಎಚ್ಚರವಾಗಿರಲು ನಾನು ಬಯಸಿದೆ. ಅದೇನಂದ್ರೆ ಅವರು ಬರುಬರುತ್ತಾ ಭಾಷಣಗಳಲ್ಲಿ ಮುಳುಗಿಹೋದ್ರು. ಇನ್ನೇನು ಭಾಷಣ ಮಾಡಿಯಾಗಿದೆ, ಬರೆಯುವುದರ ಅಗತ್ಯವೇನಿದೆ ಅಂತ ಭಾವಿಸತೊಡಗಿದರು. ನೋಡಿ, ಅವರ ಆರೇಳು ವಿಮರ್ಶಾ ಕೃತಿಗಳು ಭಾಷಣದ ಬರಹರೂಪಗಳು. ನಮ್ಮ ಆಲೋಚನೆಯನ್ನು ನಾವೇ ಬರೆಯುವುದಕ್ಕೂ, ಕೇಳಿಸಿಕೊಂಡು ಇನ್ನೊಬ್ಬರು ಬರೆಯುವುದಕ್ಕೂ ವ್ಯತ್ಯಾಸವಿರುತ್ತದೆ. ಹೀಗಾದಾಗ ವಿಮರ್ಶೆಯ ಅನೇಕ ಸಂಗತಿಗಳು ಅಲ್ಲಿ ಮರೆಯಾಗಿಬಿಡುತ್ತವೆ. ಅವರು ಅತ್ಯಂತ ಪ್ರಭಾವಶಾಲಿ ಭಾಷಣಕಾರ. ಕೇಳುಗರು ವಶೀಕರಣಕ್ಕೊಳಗಾಗುತ್ತಿದ್ದರು. ಎಷ್ಟೋ ಸಲ ಕೇಳುಗರ ಸೈಕಾಲಜಿ ಅವರ ಭಾಷಣವನ್ನು ಪ್ರಭಾವಿಸುತ್ತಿತ್ತು. ಆ ಹೊತ್ತಿಗೆ ಕ್ರಿಯೇಟ್ ಆದ ಮೂಡ್ ಅವರನ್ನು ಯಾವುದೋ ಕಡೆ ಕರೆದುಕೊಂಡು ಹೋಗುತ್ತಿತ್ತು. ನವಿರಾದ ತಿಳಿಹಾಸ್ಯ ಸಭೆಯನ್ನು ಹಿಡಿದಿಡಲು ಅವರಿಗೆ ಅಗತ್ಯವಾಗಿತ್ತು. ಅನೇಕ ಸಲ ಅಗತ್ಯವಿಲ್ಲದ ನವಿರು ಹಾಸ್ಯಗಳು ವಿಮರ್ಶೆಯನ್ನು ಆಕ್ರಮಿಸಿಕೊಳ್ಳುತ್ತಿದ್ದವು. ಇಂಥ ಭಾಷಣಗಳ ವಿಸ್ತಾರ ಕೂಡ ಕೃತಿ ಬಯಸುವ ಅಗತ್ಯಕ್ಕಿಂತ ಸಮಯ ಸಂದರ್ಭವನ್ನು ಅವಲಂಬಿಸಿರುತ್ತಿತ್ತು. ನಾನಂದುಕೊಳ್ಳುವುದೇನೆಂದರೆ ನನ್ನ ಈ ಗುರುಗಳು ಭಾಷಣದಿಂದ ತಪ್ಪಿಸಿಕೊಂಡು ಕುಳಿತು ಬರೆದಿದ್ದರೆ ಇನ್ನಷ್ಟು ಆಳವಾದ ಓದು ದಕ್ಕುತ್ತಿತ್ತೇನೊ. ಕೆಲ ನಿಗೂಢವಾದ ಚಿಂತನೆಗಳನ್ನು ಮಂಡಿಸಲು ಸಾಧ್ಯವಾಗುತ್ತಿತ್ತು. ನನಗೆ ಗೊತ್ತಿಲ್ಲ, ನನ್ನ ಊಹೆ ತಪ್ಪೂ ಇರಬಹುದು. ಆದರೆ, ಈ ವಿಷಯದಲ್ಲಿ ನಾನು ಕೊಂಚ ಏಕಾಂತಪ್ರಿಯ. ನನ್ನನ್ನು ನಾನು ಲೋ ಪ್ರೊಫೈಲ್‌ನಲ್ಲಿ ಇಟ್ಟುಕೊಳ್ಳಲು ಬಯಸುವೆ. ನನ್ನ ಪಾಡಿಗೆ ನಾನು ಕೆಲಸ ಮಾಡುತ್ತ ಕೂಡುವುದು ನನಗಿಷ್ಟ. ನಾನಷ್ಟು ಸಾರ್ವಜನಿಕ ವ್ಯಕ್ತಿಯಲ್ಲ. ಮತ್ತೆ ಮತ್ತೆ ಗುಂಪುಗಳಲ್ಲಿ, ಸಭೆಗಳಲ್ಲಿ ಕಾಣಿಸಿಕೊಳ್ಳುವುದು ನನ್ನ ವ್ಯಕ್ತಿತ್ವಕ್ಕೆ ಆಗಿಬರುವುದಿಲ್ಲ.

**◆ ನೀವು ಹಿಂದೊಮ್ಮೆ ಮಾತನಾಡುತ್ತ ಇತ್ತೀಚಿಗೆ ವಿಶ್ವವಿದ್ಯಾಲಯಗಳಲ್ಲಿ ವಿಮರ್ಶೆ ಸತ್ತುಹೋಗಿದೆ ಅಂತ ಹೇಳಿದ್ರಿ. ಇಂಥದ್ದೊಂದು ಅಭಿಪ್ರಾಯ ನಿಮ್ಮಲ್ಲಿ ಮೊಳೆಯಲು ಏನು ಕಾರಣ?**

ನಾನಿದನ್ನು ಬೇರೆ ಬೇರೆ ಅರ್ಥಗಳಲ್ಲಿ ಹೇಳಿದ್ದೆ. ವಿಶ್ವವಿದ್ಯಾಲಯಗಳಿಗೂ ಹಾಗೂ ವಿಮರ್ಶೆಗೂ ಬಹಳ ಗಹನವಾದ ಸಂಬಂಧವಿದೆ. ಜಗತ್ತಿನಲ್ಲೆಡೆ ನೀವು ನೋಡಿದರೂ ಬಹುತೇಕ ವಿಮರ್ಶಕರು ವಿಶ್ವವಿದ್ಯಾಲಯಗಳಿಂದಲೇ ಬಂದಿದ್ದಾರೆ. ಅದರಲ್ಲೂ ಕಳೆದ ಶತಮಾನ ಮತ್ತು ಹೊಸ ಶತಮಾನದ ಬಹುತೇಕ ವಿಮರ್ಶಕರು ವಿಶ್ವವಿದ್ಯಾಲಯಗಳಲ್ಲಿದ್ದುಕೊಂಡೇ ಹೊಸ ಸಿದ್ಧಾಂತಗಳನ್ನು ರೂಪಿಸಿದ್ದಾರೆ. ಇದು ಕೂಡ ವಿಜ್ಞಾನದಂತೆಯೇ. ನೋಡಿ ಈ ಕಾಲದಲ್ಲಿ ಯಾರೂ ಕೂಡ ಸುಸಜ್ಜಿತವಾದ ಪ್ರಯೋಗಾಲಯವಿಲ್ಲದೆ ವಿಜ್ಞಾನದ ಹೊಸ ಸಂಶೋಧನೆಗಳನ್ನು ಮಾಡಲಾಗುವುದಿಲ್ಲ. ಮನೆಯಲ್ಲಿ ಕುಳಿತ ಇಲ್ಲಿಂದಲೇ ನಾನು ವಿಜ್ಞಾನದ ದೊಡ್ಡ ತತ್ವಗಳನ್ನು ಹೆಣೆಯುತ್ತೇನೆಂದರೆ ಆಗದ ಮಾತು. ಇದು ಸಾಹಿತ್ಯ ವಿಮರ್ಶೆಗೂ ಅನ್ವಯಿಸುತ್ತದೆ.

ನಾವು ಹಿಂದೆ ನಮ್ಮ ಯಾರಾದರೂ ಪ್ರಾಧ್ಯಾಪಕರನ್ನು ಸಾಹಿತ್ಯದ ಚರ್ಚೆಗೆ ಕರೆದಾಗ ಅವರು ಸಂತೋಷದಿಂದ ಬರುತ್ತಿದ್ದರು. ಎಷ್ಟೋ ಸಲ ಹಾಸ್ಟೆಲ್‌ಗೆ ಬಂದು ಚರ್ಚಿಸುತ್ತಿದ್ದರು. ಸೈಕಲ್ ಮೇಲೆ ಅಥವಾ ನಡಿಗೆ ಅವರ ಪ್ರಯಾಣದ ಸಾಧನವಾಗಿತ್ತು. ಆ ಚರ್ಚೆಗಳೇ ನಮ್ಮನ್ನು ಬೆಳೆಸಿದವು. ಈಗ ಇಂಥ ವಾತಾವರಣ ಎಷ್ಟಿದೆ? ಹಿಂದಿ ವಿಭಾಗಗಳ ರಾಜಕಾರಣವು, ಸಾಹಿತ್ಯದ ಓದು ಮತ್ತು ವಿಮರ್ಶೆಗೆ ನಷ್ಟ ಉಂಟುಮಾಡಿದೆ. ಇದರಲ್ಲಿ ವಿದ್ಯಾರ್ಥಿಗಳದೇನೂ ತಪ್ಪಿಲ್ಲ. ವಿದ್ಯಾರ್ಥಿಗಳು ಎಂಥ ಪರಿಸರ ಸಿಗುತ್ತದೊ ಅಂಥ ವ್ಯಕ್ತಿತ್ವ ಪಡೆಯುತ್ತಾರೆ. ಅವರು ಪ್ರಾಧ್ಯಾಪಕರಿಂದ ಬಹುಬೇಗ ಪ್ರಭಾವಿತಗೊಳ್ಳುತ್ತಾರೆ. ಅವರಿಗೆ ನಿಜವಾಗಿಯೂ ಏನನ್ನು ತಲುಪಿಸಬೇಕೊ ಅದನ್ನು ತಲುಪಿಸಲಾಗುತ್ತಿಲ್ಲ. ಪ್ರಾಧ್ಯಾಪಕರ ವೈಯಕ್ತಿಕ ಸ್ವಾರ್ಥಕ್ಕೆ ಬಳಕೆಯಾಗುತ್ತಿದ್ದಾರೆ.